೩೮೯೫ (೪೭೫೧) **ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)** :– ಮಾನ್ಯ ಬೃಹತ್, ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯ ಪ್ರದೇಶ ಯೋಜನೆಯನ್ನು ಸ್ಥಾಪಿಸಲು ಕಾರ್ಯ ಯೋಜನೆಯನ್ನು ರೂಪಿಸಿದೆಯೇ ಹಾಗಿದ್ದಲ್ಲಿ ಆ ಕುರಿತಾದ ವಿವರಗಳೇನು;

ಆ) ಈ ಯೋಜನೆಯ ರೂಪರೇಷೆಗಳು ಮತ್ತು ಜಿಲ್ಲೆಯ ಯಾವ ಸ್ಥಳದಲ್ಲಿ ಇದನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಕೆನರಾ ವಾಣಿಜ್ಯೋದ್ಯಮ ಸಂಘ, ಮಂಗಳೂರು ರವರ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ಕೇಂದ್ರ ಸರ್ಕಾರವು ಸದರಿ ಯೋಜನೆಗೆ ದಿನಾಂಕ ೮–೮–೨೦೦೩ ರಂದು ಅನುಮೋದನೆಯನ್ನು ನೀಡಿದ್ದಾರೆ. ತದನಂತರ ಸದರಿ ಅನುಮೋದನೆಯನ್ನು ದಿನಾಂಕ ೩೦–೮–೨೦೦೫ ರವರೆಗೆ ವಿಸ್ತರಿಸಲಾಗಿದೆ.

ಇದೇ ಸಂದರ್ಭದಲ್ಲಿ ಓಎನ್ ಜಿಸಿಯು ಸಂಸ್ಥೆಯು ಮಂಗಳೂರಿನ ಉದ್ದೇಶಿತ ಕರಾವಳಿ ವಿಶೇಷ ಅರ್ಥಿಕ ವಲಯದಲ್ಲಿ ಬೃಹತ್ ಪೆಟ್ರೋಕೆ ಮಿಕಲ್ ಸ್ಥಾವರ ಸ್ಥಾಪಿಸಲು ಹಾಗೂ ಆರ್ಥಿಕ ವಲಯ ನಿರ್ಮಾಣದಲ್ಲೂ ಭಾಗವಹಿಸಲು ಮುಂದು ಬಂದಿದ್ದು, ಅದರನ್ವಯ ಕೆನರಾ ಕೈಗಾರಿಕೆ ಮತ್ತು ವಾಣಿಜ್ಯ ಸಂಘ, ಓಎನ್‌ಜಿಸಿ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಒಡಂಬಡಿಕೆಯನ್ನು ದಿನಾಂಕ ೩೦.೮.೨೦೦೪ ರಂದು ಸಹಿ ಮಾಡಲಾಗಿದೆ.

ಯೋಜನೆಯನ್ನು ಕಾರ್ಯಗತಗೊಳಿಸಲು ಒಂದು ವಿಶೇಷ ಕಂಪನಿಯನ್ನು ನೊಂದಾಯಿಸುವ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ ಮಂಡಳಿಯ ವಶದಲ್ಲಿರುವ ಜಮೀನಿನ ಜೊತೆಗೆ ಹೆಚ್ಚುವರಿ ೪೫೮ ಎಕರೆ ಜಮೀನನ್ನು ಭೂಸ್ವಾಧೀನಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. ಪೆಟ್ರೋಕೆಮಿಕಲ್ ಸಂಕೀರ್ಣಕ್ಕೆ ಸಂಬಂಧಿಸಿದಂತೆ, ಪೂರ್ವಬಾವಿ ಕ್ರಮಗಳನ್ನು ಓ ಎನ್ ಜಿ ಸಿ ಕೈಗೊಂಡಿದೆ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿದೆ.

ಆ) ಸದರಿ ವಿಶೇಷ ಆರ್ಥಿಕ ವಲಯವನ್ನು ನವ ಮಂಗಳೂರು ಸುತ್ತಮುತ್ತಲಿನ ಪ್ರದೇಶ ಎಂಆರ್ ಪಿ.ಎಲ್ ತೈಲ ಶುದ್ದೀಕರಣ ಘಟಕದ ಸುತ್ತಮುತ್ತಲಿನ ಪ್ರದೇಶ ಹಾಗೂ ಬೈಕಂಪಾಡಿ ಪ್ರದೇಶದಲ್ಲಿ ಜಮೀನಿನಲ್ಲಿ ಸ್ಥಾಪಿಸಲಾಗುವುದು. ಯೋಜನೆಯ ಅನುಷ್ಟಾನಕ್ಕಾಗಿ ವಿಶೇಷ ಕಂಪನಿಯೊಂದನ್ನು ನೊಂದಾಯಿಸಲು ಕಾರ್ಯ ಪ್ರಗತಿಯಲ್ಲಿದೆ ಹಾಗೂ ಯೋಜನಾ ವೆಚ್ಚವನ್ನು ಅಂತಿಮಗೊಳಿಸಲಾಗಿದೆ.

೩೮೯೬ (೪೫೭೯) ಶ್ರೀ ರಾಜೇಂದ್ರವರ್ಮಾ (ಹುಲಸೂರು) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಈ ಸಾಲಿನಲ್ಲಿ ಮುರಾರ್ಜಿ ವಸತಿ ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆಯೇ;

ಆ) ಬೀದರ್ ಜಿಲ್ಲೆ, ಹುಲಸೂರು ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಲ್ಲಿಗೆ ವಸತಿ ಶಾಲೆ ಮಂಜೂರು ಮಾಡಲು ಕ್ರಮ ಕೈಗೋಳ್ಳಲಾಗುವುದೇ;

ಇ) ಮಂಜೂರು ಮಾಡುವುದಾದರೆ ಯಾವಾಗ ಪ್ರಾರಂಭಿಸಲಾಗುವುದು?

ಡಾ.॥ ವೈ ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು, ೨೦೦೫-೦೬ ನೇ ಸಾಲಿನಲ್ಲಿ ಒಟ್ಟು ೪೩ ವಸತಿ ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

೩೮೯೭ (೪೫೮೦) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :- ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳೇನು;

ಆ) ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು;